ಎಷ್ಟು ಜಾಗರೂಕರಾಗಿದ್ದರೂ ಕಡಿಮೆಯೇ. ಮನೆಯಲ್ಲಿ ಕುಟುಂಬದ ಯಾವುದೇ ಸದಸ್ಯರು ಮಗುವಿನ ಎದುರು ಆತನ ತಂದೆ ಅಥವಾ ತಾಯಿಯ ಬಗ್ಗೆ ಎಂತಹ ಸಂದರ್ಭದಲ್ಲಿಯೂ ಕೇವಲವಾಗಿ ಮಾತನಾಡಬಾರದು. ಹಾಗೆಯೇ, ದಿನನಿತ್ಯದ ಬದುಕಿನಲ್ಲಿ ಮಕ್ಕಳು ತಮ್ಮ ಒಡನಾಟದಲ್ಲಿ ಬರುವ ಯಾವ ವ್ಯಕ್ತಿಯ ಬಗ್ಗೆಯೂ ನಾವು ಅಪಹಾಸ್ಯದ ಮಾತುಗಳನ್ನಾಗಲಿ ಅಥವಾ ತಾತ್ಸಾರದ ಮಾತುಗಳನ್ನಾಗಲೀ ಆಡದಂತೆ ಎಚ್ಚರ ವಹಿಸಬೇಕು. ಏಕೆಂದರೆ, ನಮ್ಮ ಮಾತುಗಳು ಆ ಎಳೆಯ ಮನಸ್ಸಿನ ಮೇಲೆ ಅಚ್ಚಳಿಯದಂತೆ ಉಳಿದು ಬಿಡುತ್ತವೆ. ಮಕ್ಕಳು ಕೂಡ ಆ ವ್ಯಕ್ತಿಗಳ ಬಗೆಗೆ ತಾತ್ಸಾರದ ಭಾವವನ್ನೇ ತಾಳುತ್ತಾರೆ. ಇದು ಎಂದಿಗೂ ಒಳ್ಳೆಯ ಬೆಳವಣಿಗೆಯಲ್ಲ.

ಅಂತೆಯೇ ತಂದೆ ತಾಯಿಯರು, ಮಕ್ಕಳ ಶಿಕ್ಷಕರ ನಕಾರಾತ್ಮಕ ಅಂಶಗಳನ್ನು ಯಾವ ಕಾರಣಕ್ಕೂ ಮಕ್ಕಳ ಎದುರು ಚರ್ಚಿಸಬಾರದು. ಮಕ್ಕಳು ಶಿಕ್ಷಕರ ಬಗ್ಗೆ ಸಣ್ಣ ಪುಟ್ಟ ದೂರುಗಳನ್ನು ಮನೆಯಲ್ಲಿ ಹೇಳಿದಾಗ ಅದನ್ನು ವೈಭವೀಕರಿಸಬಾರದು. ಶಿಕ್ಷಕರ ನೀತಿ ನಿಯಮಗಳು ಅವರ ಒಳಿತಿಗಾಗಿಯೇ ಎಂದು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು. ಇದರಿಂದ ಮಕ್ಕಳಿಗೆ ಶಿಕ್ಷಕರ ಬಗ್ಗೆ ಎತ್ತರದ ಹಾಗೂ ಗೌರವ ಭಾವನೆಯು ಮೂಡುತ್ತದೆ. ಇದು ಮಕ್ಕಳ ಕಲಿಕಾ ಪ್ರಕ್ರಿಯೆಯ ಮೇಲೆ ಒಳ್ಳೆಯ ಪರಿಣಾಮವನ್ನು ಬೀರುತ್ತದೆ. ಒಂದು ವೇಳೆ ಶಿಕ್ಷಕರ ವಿಚಾರ ಅಥವಾ ನಿಯಮ ನಿಮಗೆ ಸರಿ ಕಾಣದಿದ್ದಲ್ಲಿ, ಅದನ್ನು ಖಂಡಿತಾ ಮಕ್ಕಳ ಎದುರು ಚರ್ಚಿಸಬಾರದು. ಅದನ್ನು ನೀವೇ ಖುದ್ದಾಗಿ ಶಾಲೆಗೆ ಭೇಟಿ ನೀಡಿದಾಗ ಶಿಕ್ಷಕರ ಜೊತೆಯಲ್ಲಿಯೇ ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ನಾವು ಯಾವುದೇ ವ್ಯಕ್ತಿಯಿಂದ ಏನನ್ನಾದರೂ ಕಲಿಯಬೇಕಾದರೆ, ಮೊದಲು ಆ ವ್ಯಕ್ತಿಯ ಬಗೆಗೆ ನಮಗೆ ಗೌರವ ಭಾವನೆಯಿರಬೇಕು. ಅಂತಹ ವ್ಯಕ್ತಿಯಿಂದ ಪಡೆಯುವ ಜ್ಞಾನ ಮಾತ್ರವೇ ಹೆಚ್ಚು ದಿನ ನೆನಪಿನಲ್ಲಿ ಉಳಿಯುವಂತಹದ್ದು. ಅದಕ್ಕೆ ಅಲ್ಲವೇ ನಮ್ಮ ಹಿರಿಯರು, 'ಗುರು ಬ್ರಹ್ಮಃ ಗುರು ವಿಷ್ಣುಃ ಗುರುದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮಃ ತಸ್ಮಯಶ್ರೀ ಗುರುವೇ ನಮಃ' ಎಂದು ಗುರುವನ್ನು ದೇವಾನುದೇವರಿಗೆ ಹೋಲಿಸಿರುವುದು!



ಮಕ್ಕಳು ಶಿಕ್ಷಕರನ್ನು ಇಷ್ಟಪಟ್ಟಾಗ ಮಾತ್ರವೇ ಅವರು ಹೇಳಿಕೊಡುವ ಪಾಠವನ್ನು ಆಸಕ್ತಿಯಿಂದ ಕೇಳಿಸಿಕೊಳ್ಳಲು ಸಾಧ್ಯ. ಆಗ ಮಾತ್ರವೇ ಕಲಿಕೆಯು ಸುಲಭ ಹಾಗೂ ಪರಿಣಾಮಕಾರಿಯಾಗುತ್ತದೆ. ಅಲ್ಲದೆ, ಈಗಿನ ದಿನಗಳಲ್ಲಿ ನಿಯಮಗಳ ಪ್ರಕಾರ ಮಕ್ಕಳಿಗೆ ಶಾಲೆಗಳಲ್ಲಿ ದೈಹಿಕವಾಗಿ ಶಿಕ್ಷಿಸುವಂತೆಯೂ ಇಲ್ಲ. ಏನಿದ್ದರೂ ಬಾಯಿ ಮಾತಿನಲ್ಲಿಯೇ ಬುದ್ಧಿವಾದವನ್ನು ತಿಳಿಹೇಳಬೇಕು. ಹೀಗಿದ್ದಾಗ ಮಕ್ಕಳಿಗೆ ಗುರುಗಳ ಬಗ್ಗೆ ಭಯ ಭಕ್ತಿಯನ್ನು ತಂದೆ ತಾಯಿಯರು ಮನೆಯಿಂದಲೇ ತುಂಬಬೇಕು. ಅಪ್ಪಿ ತಪ್ಪಿಯೂ ಮಕ್ಕಳ ಎದುರು ಗುರುಗಳ ಬಗ್ಗೆ ಅಗೌರವದ ಮಾತುಗಳನ್ನು ಆಡದಂತೆ ಎಚ್ಚರ ವಹಿಸಬೇಕು ಹಾಗೂ ಈ ಮೂಲಕ ತಮ್ಮ ಮಕ್ಕಳ ಕಲಿಕಾ ಪ್ರಕ್ರಿಯೆ ಮತ್ತಷ್ಟು ಉತ್ತಮವಾಗಲು ತಮ್ಮ ಕೈ ಜೋಡಿಸಬೇಕು. ■

# ಥರ್ಮೋಕೋಲ್‌ನಲ್ಲಿ ಅರಳಿದ ಕಲಾಕೃತಿ

■ ಬಳಕೂರು ವಿ.ಎಸ್.ನಾಯಕ



ಯಕ್ಷಗಾನದ ಕಿರೀಟ ಪ್ರಭಾವಳಿ ಮಂಟಪ, ಕಂಬಗಳು, ಪ್ರಾಣಿಗಳಲ್ಲಿ ಆನೆ ಸಿಂಹ, ಹುಲಿ ಜಿಂಕೆ, ಪಕ್ಷಿಗಳು, ಜಲಚರಗಳು ಹೀಗೆ ಒಂದೇ ಎರಡೇ ಎಲ್ಲರೂ ಅಚ್ಚರಿ ಪಡುವಂತೆ ಒಂದಕ್ಕಿಂತ ಒಂದು ವಿಭಿನ್ನ ಕಲಾಕೃತಿಗಳು ಕಲಾವಿದನ ಕಲ್ಪನೆಯಲ್ಲಿ ಅರಳಿ ನಿಂತಿವೆ. ಅದೂ ಥರ್ಮೋಕೋಲ್ ಕಲಾಕೃತಿಗಳು.

ಪ್ರತಿ ನಿತ್ಯ ಮನೆಯಲ್ಲಿ ಕುಳಿತುಕೊಳ್ಳಲು ಸೋಫಾ ಆಸನಗಳಲ್ಲಿ ಬಳಕೆಯಾಗುವ ಥರ್ಮೋಕೋಲ್‌ನಲ್ಲಿಯೂ ಕೂಡ ಏನೆಲ್ಲಾ ಕಲಾಕೃತಿಗಳನ್ನು ಮಾಡಬಹುದು ಎಂಬುದಕ್ಕೆ ಸಾಕ್ಷಿಯಂತಿದೆ ಕಲಾವಿದ ಸುಧೀರ್ ಕುಮಾರ್.ಜಿ.ಮಾಡಿರುವ ಕಲಾಕೃತಿಗಳು.

ಇವರು ಮಂಗಳೂರಿನ ಕಾವೂರಿನವರು. ಮಹಾಲಸ ಕಾಲೇಜ್ ಆಫ್ ಫೈನ್ ಆರ್ಟ್ಸ್, ಮಂಗಳೂರು ಇಲ್ಲಿ ಎಂ.ಎಫ್.ಎ.ಪದವೀಧರರು. ಪ್ರಸ್ತುತ ಮಂಗಳೂರಿನ ಸರ್ಕಾರಿ ಸಂಯುಕ್ತ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಂತಹ ಕಲೆಯು ನೈಜವಾಗಿಯೂ, ಹೊಸತನ ಮತ್ತು ಸೌಂದರ್ಯ ಹೆಚ್ಚಿಸುವ ಕಲೆಯಾಗಿದ್ದು, ಥರ್ಮೋಕೋಲ್‌ನಲ್ಲಿ ಮಾಡಿದ ಕಲಾಕೃತಿಗಳು ನಾಟಕ ರಂಗದಲ್ಲಿ, ನೃತ್ಯ ಪ್ರದರ್ಶಿಸುವ ಪರಿಕರ ಗಳಾಗಿ ಮೆರವಣಿಗೆಗೆ ಬೇಕಾದ ಮಾಡೆಲ್‌ಗಳನ್ನು ಮಾಡುತ್ತಾರೆ. ಕಾರಣ ಇದು ಅತಿ ಅದ್ಭುತ ಮತ್ತು ಆಕರ್ಷಣೀಯವಾಗಿ ಕಾಣುವುದರಿಂದ ಜನರನ್ನು ಸೆಳೆಯುವಲ್ಲಿ ಹೆಚ್ಚು ಕಾರ್ಯ ನಿರ್ವಹಿಸುತ್ತದೆ.

ಇವರು ಇಂತಹ ವಿನೂತನ ಕಲಾಕೃತಿಗಳನ್ನು ತಮ್ಮ ಶಾಲಾ ವಿದ್ಯಾರ್ಥಿಗಳಿಗೆ ಪರಿಚಯಿಸುವುದರ ಮೂಲಕ ಆರಂಭಿಸಿದ್ದಾರೆ. ಇಂತಹ ಕಲೆಯನ್ನು ಆಯ್ಕೆ ಮಾಡಲು ಕಾರಣ ಮಕ್ಕಳಿಗೆ ಹೊಸತನ ಮತ್ತು ಕಲೆಯ ಪರಿಚಯ ಮಾಡಿದಾಗ ಕಲಾಕೃತಿಗಳ ಮೆರಗು ಇವೆಲ್ಲವೂ ಒಳ್ಳೆಯ ಅಂಶವನ್ನು ತಂದುಕೊಡುತ್ತದೆ. ಈ ಕಲಾಕೃತಿಗಳು ಹೆಚ್ಚು ಕಾಲ ಬರುತ್ತದೆ. ಅದರ ಜೊತೆಗೆ ವಿಭಿನ್ನ ಕಲಾ ಪ್ರಕಾರದ ಪರಿಚಯವನ್ನು ಮಾಡಿದ ಹಾಗೇ ಆಗುತ್ತದೆ. ಕಲಾ ತರಗತಿಯಲ್ಲಿ ಕಲಾ ವಿದ್ಯಾರ್ಥಿಗಳು ತಾವು ಮಾಡಿದ ಥರ್ಮೋಕೋಲ್ ಕಲಾಕೃತಿಗಳನ್ನು ಅಚ್ಚರಿಪಟ್ಟಿದಂತೂ ಸತ್ಯ. ಸುಧೀರ್‌ರವರು ಈ ಕಲೆಯನ್ನು ಸುಮಾರು 400 ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ಅದರಲ್ಲೂ ಪುತ್ತೂರು, ಮಂಗಳೂರು, ಸುಳ್ಯ, ಮೂಡಬಿದರೆ ಹೀಗೆ ಹಲವಾರು ಕಡೆಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿದ್ದಾರೆ.

ಈ ಕಲಾಕೃತಿಗಳನ್ನು ಮಾಡುವುದು ತುಂಬಾ ಸುಲಭ. ಮಾರುಕಟ್ಟೆಯಲ್ಲಿ ಸಿಗುವ ಥರ್ಮೋಕೋಲ್ ಶೀಟನ್ನು ಖರೀದಿಸಿ ನಂತರ ಕಲಾಕೃತಿಗಳಿಗೆ ಬೇಕಾದ ಆಕಾರವನ್ನು ಕತ್ತರಿಸಿ ಯಾವ ಬಗೆಯ ಕಲಾಕೃತಿಗಳನ್ನು ಮಾಡಬೇಕೋ ಅದಕ್ಕೆ ಗುರುತನ್ನು ಹಾಕಿ ನಂತರ ಕತ್ತರಿಸಿ ಎಸ್.ಆರ್.ಗಮ್‌ನಿಂದ ಅಂಟಿಸಿ, ಶೋಲ್ಡರಿಂಗ್ ಮೆಷಿನ್‌ನಿಂದ ಅದಕ್ಕೆ ಬೇಕಾದ ಆಕಾರವನ್ನು ಕೊರೆದು ಸ್ವಲ್ಪ ಸಮಯದ ನಂತರ ಕಲಾಕೃತಿಗಳಿಗೆ ಹೊಂದುವಂತೆ ಬಣ್ಣವನ್ನು ಲೇಪನ ಮಾಡಬೇಕು. ■